ಕರ್ಣಾಟಕ ಕಾವ್ಯಕಲಾನಿಧಿ-ಕೋಶಸಂಖ್ಯೆ ೪೮.

# ಧ್ರುವ ಚರಿತ್ರೆ

ಉದಯ ರಾಗ

(ವಾರ್ಧಿಕಷಟ್ಪದಿ)

OSMANIA UNIVERSITY
COLLEGE LIBR·RY.

ಮಂ. ಆ. ರಾಮಾನುಜಯ್ಯಂಗಾರ್ಯರಿಂದ
ಶೋಧಿಸಲ್ಪಟ್ಟು

ಮೈಸೂರು:
ಶ್ರೀನಿವಾಸ ಮುದ್ರಾಶಾಲೆಯಲ್ಲಿ ಮುದ್ರಿತವಾಗಿದೆ

1916

ಕ್ರಯ ೧ ಆಣೆ ]

UNIVERSAL LIBRARY
OU_200616
UNIVERSAL LIBRARY

CHECKED 1951

# ಅರಿಕೆ

ಪುಣ್ಯಶ್ಲೋಕನಾದ ಧ್ರುವನ ಸ್ಮರಣೆಯನ್ನು ಮಾಡಿದರೆ ಪಾಪವು ನಾಶವಾಗಿ ಪುಣ್ಯವು ಲಭಿಸುವುದೆಂದು ಸಾಮಾನ್ಯವಾಗಿ ನಮ್ಮ ಜನರಲ್ಲಿ ಮುಖ್ಯವಾಗಿ ನಮ್ಮ ಹೆಂಗಸರಲ್ಲಿ ನಂಬಿಕೆ ಇರುವುದರಿಂದ ಅನೇಕರು ಈ ಉದಯರಾಗವನ್ನು ಏಳುತ್ತಲೇ ಹಾಡುತ್ತಾರೆ. ಇದು ಉಡುಪಿಯ ಪ್ರಾಂತದಲ್ಲಿ ವಿಶೇಷವಾಗಿ ಪ್ರಚಾರದಲ್ಲಿದೆ.

ಈ ಗ್ರಂಥದ ಕೊನೆಯ ಪದ್ಯದಲ್ಲಿ "ವರದವೇಂಕಟರಾಯ ಕರುಣಿಸುವನು" ಎಂದಿರುವುದನ್ನು ನೋಡಿದರೆ, ಯಾವನೋ ವೇಂಕಟರಾಯನೆಂಬ ಕವಿಯು ಇದನ್ನು ಬರೆದಿರಬಹುದೆಂದು ತೋರುತ್ತದೆ. ಶೈಲಿಯನ್ನು ನೋಡಿದರೆ ಸುಮಾರು ಮೂರು ಶತಮಾನಗಳ ಹಿಂದೆ ಹುಟ್ಟಿರಬಹುದೆಂದು ತೋರುತ್ತದೆ. ಶೈಲಿಯು ಸುಲಭವಾಗಿದೆ. ಗ್ರಂಥವು ಕಿರಿದಾದರೂ ಕಥೆಯು ಸಮಗ್ರವಾಗಿದೆ. ಸ್ತೋತ್ರಭಾಗದಲ್ಲಿ ಕೆಲವು ಪದ್ಯಗಳು ಬಿಟ್ಟುಹೋಗಿರುವಂತೆ ತೋರುತ್ತದೆ.

ಅಕ್ಷರಜ್ಞರಲ್ಲದ ಹೆಂಗಸರ ಬಾಯಲ್ಲಿ ಪಾಠವಾಗಿ ಬಂದಿರುವಕಾರಣ ಇದರಲ್ಲಿ ಬಹಳ ತಪ್ಪುಗಳು ಬಿದ್ದಿದ್ದುವು. ಸಾಧ್ಯವಾಗುವತನಕ ಆ ತಪ್ಪುಗಳನ್ನು ತಿದ್ದಿ, ತಿದ್ದಿದ ಭಾಗಗಳನ್ನು ಮೇಲುಗಡೆ ಹಾಕಿ ಗ್ರಂಥಸ್ಥ ಪಾಠಭೇದಗಳನ್ನು ಪಾಠಾಂತರವಾಗಿ ಕೆಳಗೆ ಹಾಕಿದ್ದೇವೆ.

ಈ ಗ್ರಂಥವು ಮುದ್ದಾಗಿ, ಮಕ್ಕಳಿಗೆ ಬಾಯಿ ಪಾಠವನ್ನು ಮಾಡಲು ಉಪಯುಕ್ತವಾಗಿರುವುದರಿಂದ ಇದನ್ನು ಮುದ್ರಿಸಿದ್ದೇವೆ. ಈ ಗ್ರಂಥವನ್ನು ಕಳುಹಿಸಿಕೊಟ್ಟ ಮ|| ರಾ|| ನೀಲಕಂಠರಾಯರಿಗೆ ಬಹಳ ಕೃತಜ್ಞರಾಗಿದ್ದೇವೆ.

ಶ್ರೀಃ

# ಧ್ರುವ ಚರಿತ್ರೆ

## ॥ ಉದಯರಾಗ ॥

(ವಾರ್ಧಿಕ ಷಟ್ಪದಿ)

— ಹರಯೇ ವಾಸುದೇವಾಯ ನಮೋ

ಪಲ್ಲವಿ॥ ಶ್ರೀವಾಸುದೇವ ಜಯ ಸೇವಕಜನಪ್ರಿಯಾ ।
ಭೂವಧೂರಮಾರಮಣ ಆನತಜನೋದ್ಧರಣ ।
ಗೋವರ್ಧನೋದ್ಧಾರ ಗೋಪೀಮನೋಹರಾ ದೇವ ತವಪದಕೆ ಶರಣು॥

1.

ಉತ್ತಾನಪಾದನೃಪನಣುಗ ತನ್ನಯ ತಂದೆ ।
ಯುತ್ತಮಾಂಕದ ಮೇಲೆ ಕುಳ್ಳಿರಲದಂ ಕಂಡು ।
ಮತ್ತವನ ಸತಿ ಸವತಿಮನದೆ ಕಡುಸುಯ್ಯುತ್ತ ಚಿತ್ತದೊಳ್
[ಕ್ರೋಧವಿಡಿದು ॥
ಅತ್ತತ್ತ ಪೋಗು ನೀನಾರಿಲ್ಲಿ ಕುಳ್ಳಿಹಡೆ ।
ನುತ್ತ ಝೋಂಪಿಸಿ ಯಧಿಕಕಠಿನವಾಕ್ಯವ ನುಡಿದು ।
ಮತ್ತವನ ಪಿಡಿದು ನೂಂಕಲು ಸಭೆಯು ಮುಂದೆ ಸವಳೊತ್ತಿದಂತಾಗೆ
[ಮರುಗಿ ॥

2.

ಮೆಲ್ಲನಲ್ಲಿಂದ ನಡೆತಂದು ತನ್ನಯ ತಾಯ ।
ಮೆಲ್ಲಡಿಗಳಂ ಪಿಡಿದು ಸವತಿಯಾಡಿದ ನುಡಿಯ ।
[1]ಪೊಲ್ಲ[1] ಸೂಚಿಸಬದಂ ಕೇಳಿ ಮನದೊಳಗೆಯತಿತಲ್ಲಣಿಸುತಿಂತೆಂದಳು ॥

---

ಪಾಠಾಂತರ—1. ಸೊಲ್ಲ

ಎಲ್ಲ ಗ್ರಹಿಸಿದೆ ಮಗನೆ ಕೇಳ ಮಾಡುವುದೇನು ।
ಸಲ್ಲದೆನ್ನಯ ಪತಿಗೆಯೆನ್ನ ನುಡಿ ನಿನಗೆ ಸಿರಿ ।
ವಲ್ಲಭನೆ ಗತಿಯೆಂದು ಪೇಳಲಾವಾಕ್ಯಮಂ ಕೇಳ ಯೋಚನೆಗೆಯ್ದನು ॥

3.

ತಂದೆಮತವಂ ತಿಳಿದು ತಾಯ ವಾಕ್ಯವ ಕೇಳ್ದು ।
ಮುಂದೆನಗೆ ಗತಿ ಮತಿಯು ಹರಿಯಲ್ಲದಿಲ್ಲೆಂದು ।
ಸಂದೇಹಮಂ ಬಿಟ್ಟು ಸದನಮಂ ಪೊಱಮಟ್ಟು ಏಕೋಮನಸ್ಸಿನಿಂದ ॥
ಮುಂದೆ ಪಥಮಂ ಪಿಡಿಯುತ್ತೈದು ವರುಷದ ಪಸುಳೆ ।
ಮಂದಗತಿಯಿಂ ರಾಜಬೀದಿಯೊಳ್ ಬರೆ ಕಂಡು ।
ಕಂದನಂ ಬಿಟ್ಟೆಂತು ನಿಂದರೈ[1] ಮಾತಪಿತರೆಂದರಾ[1]ಪುರದ ಜನರು ॥೩॥

4.

ಬರಲು ಮುಂಮಾರ್ಗದೊಳ್ ನಾರದಂ ಕಣ್ಣಿದಿರೆ ।
ಬರೆ ಕಂಡು ಎಱಗಿದರೆ,[2] ಪಿಡಿ[2]ದೆತ್ತಿ ಬೋಳೈಸಿ ।
ದೊರೆಗುವರ ನೀನೆಲ್ಲಿಗೆಯ್ದಿದಪೆ, ಗಹನಮಂ ಪೊಕ್ಕು ತಪಮಂ ಚರಿಸುತ ॥
ಹರಿಯು ಮೆಚ್ಚಿಸಿ ಕರುಣಮಂ ಪಡೆವೆನೆನಲು, ಮುನಿ ।
ವರನು ತಾ ಕೇಳ ವಿಸ್ಮಿತನಾಗಿ ಸಿರಿದರನ ।
ಶರಣನಿವನೆಂದು[3] ಮಂತ್ರೋಪದೇಶವ[3] ಕೊಟ್ಟುಹರಸಿ ಬೀಳ್ಕೊಟ್ಟನಂದು ॥

5.

ಆಮುನಿ[4]ಗಳುಪದೇಶ[4]ವಂ ಕೊಂಡು [5]ವರಬದರಿ ।
ಕಾಮಹಾಶ್ರಮದುತ್ತ[5]ಮಸ್ಥಳವನಱಸಿ ನಿ ।
ಸ್ಸೀಮ ಕುವರಂ[6] ಮಜ್ಜನವನೆಸಗಿ ಯಷ್ಟಾಂಗಯೋಗದಿಂ ಕುಳ್ಳಿರ್ದನು ॥
ವ್ಯೋಮದೊಳ್[6] ಹೃತ್ಕಮಲಮಧ್ಯದೊಳ್[6] ಸಂತತಂ ।
ಕೋಮಲತನುಚ್ಛವಿಯ ಹರಿಯನೇ ನೆಱೆ ಪಿಡಿದು ।
ಕಾಮಿತಬಹಿರ್ಭಾವಗಳನೆಲ್ಲವಂ ತೊಱೆದು[7] ವಿದಿತ[7]ತಪಮಂ ಗೆಯ್ದನು ॥

---

ಪಾ.—1. ತಾಯಿತಂದೆಗಳೆಂದರಾ. 2. ಮಣಿ. 3. ವರಉಪದೇಶಮಂ. 4. ಯ ಉಪದೇಶಮಂ. 5. ಬಾದರಾಶ್ರಮದೆಡೆಯೊಳಿಹಉತ್ತಮ. 6. ಸ್ನಾನ ಮಜ್ಜನವ ನೆಸಗಿ ಯಷ್ಟಾಂಗಯೋಗದಿಂ ಕುಳಿತನು. 7. ಯಧಿಕ.

6.

ಒಂದುತಿಂಗಳು[1] ಫಲಾಹಾರದಿಂ ಕಳೆಯೆ[1] ಮ |
ತ್ತೊಂದೆರಡು ಪಕ್ಷಕ್ಕೆ[2] ತಱಗೆಲೆಗಳಾಹಾರ[2] |
ವೊಂದೆರಡು[3] ಮಾಸಕ್ಕೆಯನಿಲನಾಹಾರದಿಂದಿರೆ ಕಂಡು ಪ್ರೇಮದಿಂದ ||
ಇಂದಿರೇಶಂ ತನ್ನ ಭಜಿಸಿದಂ ಗಡ ಹಸುಳೆ |
ನೊಂದಂ ತಪೋಜ್ವಾಲೆಯೊಳಗೆಂದು[4] ವಿನತೆಯಾ |
ನಂದನನ ಕಂದರವನೇಱಿ[4] ಬೇಗನೆ ಬಂದು ಬಾಲಕನ ಮುಂದೆಸೆದನು[4] ||

7.

ಹರಿಯೆ ಹತ್ತಿರ ಬಂದು ನಿಂದಿರಲ್ ಕರಚರಣ |
ಸರಸಿಜದ ತಂಗಾಳಿ ಬೀಸಲ್ಕೆ ತಪದಲಿ |
ದುರ್ಱರಿಗೆ ತಂಪಾಗಲೆತ್ತಣದು[5] ಶೈತ್ಯವಿದೆಂದು[5] ಕಣ್ದೆಱೆದು ನೋಡಲಾಗ ||
ಪರಮಪುರುಷಂ ಸಮೀಪದೊಳಿರಲ್ಕದ ಕಂಡು |
ನೆರೆ ಗೋಚರಿಸಲು ಪೊಂಪುಳಿವೋಗಿ ಸಾಷ್ಟಾಂಗ |
ವೆಱಗಿ ವಿನಮಿತಭಾವದಿಂದೊಂದು ಗಳಿಗೆ[6]ವರಂ[6]ವೀಕ್ಷಿಸಿದನಾಬಾಲನು ||

8.

[7]ಅರುಣಾತಿತೇಜದಿಂ[7] ಚರಣಪಂಕೇಜ[8]ದಿಂ[8] |
ಮೆಱೆವ ಧ್ವಜವಜ್ರರೇಖಾಂಕ[9]ದಿಂ[9] ಮುಖ್ಯ[10]ದಿಂ[10] |
ನೆಱೆ ಝಣತ್ಕಾರ[11]ದಿಂ[11]ಸ್ಫುರಿಪ ಮಂಜೀರ[12]ದಿಂ[12]ಕಿರುಗೆಜ್ಜೆಪೆಂಡೆಯ[13]ದಲಿ[13]
ಮಿಱುಪ ತೇಜದ ಜಾನು[14]ಜಂಘೆಯಿಂ ಭಂಗಿಯಿಂ[14] |
ದುರುಟನಿಂದೆಸೆವ ರಂಭೋರುಗಳ ವಿವರಗಳ |
ವರಸುಪೀತಾಂಬರದ ಉಡಿಗೆಯಿಂ ತೊಡಿಗೆಯಿಂದಾಮೂರ್ತಿ ಕಣ್ಗೆಸೆದನು ||

---

ಪಾ.—1. ಕೆಲವು ಪಲಹಾರದಿಂದ. 2. ತರಗೆಲೆಯು ಆಹಾರವು. 3. ಮತ್ತೊಂದೆರಡು. 4. ವಿನತಾತ್ಮಜನ ಕಂದರವೇರಿ ಐತಂದಾಗ ಬಾಲಕನಮುಂದೆ ಎಸೆದಿರ್ದನೆಂದು. 5. ಶೀತಳಸ್ಥಳದೆಂದು. 6. ಪರಿಯಂತರಂ. 7. ಅರುಣನತಿತೇಜದಿಂ. 8, 9, 10, 11, 12. ನಂ. 13 ವನು. 14. ಜಂಗನಂ ರಂಗನಂ.

9.

ಗಳದರೇಖೆಯ ಕಂಬುಕಂಧರವ ಚಂದಿರನ ।
ತೆಱದ ಮೊಗದೋಜೆಯುಂ ಸರಸಿಜವಿರಾಜೆಯುಂ ।
ಕಿರುನಗೆಯುವದನವುಂ ನಿಗಮಾದಿಸದನವುಂ ಎವೆಯಿಕ್ಕದೀಕ್ಷಿಸಿದನು ॥
ಕಿರುಡೊಳ್ಳನುದರ ಸುೞಿನಾಭಿಯುಂ ಶೋಭೆಯಿಂ ।
ಭರದಲೊಪ್ಪುವ ತಿವಳಿಯುಂದವುಂ ಚೆಂದವುಂ ।
¹[ಶರದಭ್ರದಂತೆಸೆವುರಸ್ಥಲದೊಳಿಹ ಸಿರಿಯ ಶೋಭೆಯುಂ ಕಂಡನಂದು¹ ॥]

10.

ಸರಭಸದೆ ಹೊಳೆವ ಕೇಯೂರವುಂ ಹಾರವುಂ ।
ಮೆಱೆವ ಕೌಸ್ತುಭಮಾಲೆ ಯುದಱಿಂ ಮೇಲೆ ।
ಭರದೆ ಬಿಗಿದಪ್ಪಿ ಸಿರಿ ²ನೆಲಸಿದಾನೆಲೆಯು²ನೀಕ್ಷಿಸಿದನಾಬಾಲನಂದು ॥
ಉರುಟೆಸೆವ ಗಲ್ಲ ಕರ್ಣದ್ವಯದ ಕುಂಡಲವ ।
ಪೆಱೆನೊಸಲ ತಿಲಕವಂ ಮೃಗಲತಾಚಲಕವಂ ।
ಶರದಂಡನನಯನವಂ ವರಶೇಷಶಯನನಂ ಚಾಂಪಕಾಗ್ರನಾಸಿಕನನು ॥

11.

ಕಮನೀಯಮೂರ್ತಿಯುಂ ಕಂಡು ಹರ್ಷಿತನಾಗಿ ।
ನಮೊ ಎಂದು ನುತಿಸಲ್ಕೆ ನುಡಿ ತೊದಲಲದ ಕಂಡು ।
ರಮೆಯುರಸ ಪಾಂಚಜನ್ಯವ ವದನಕಮರಿಸಲ್ ನುಡಿತೋಱಲಾಕ್ಷಣದೊಳು
³ಅಮರ್ದಿನಂದದ³ ಬಾಲನಾಡಿದ ನುಡಿಯು ತಾ ।
ರಮಣೀಯಮಾಗಿ ನಿಗಮಾರ್ಥಸಮ್ಮತವೆನಿಸೆ ।
ಯಮಿತಮಹಿಮನ ಪದಕ್ಕೆಱಗಿ ಸಂಸ್ತುತಿಗೆಯ್ದನೇನೆಂಬೆನಾಕ್ಷಣದೊಳು ॥

12.

ಜಯ ಕಮಲನಾಭ ಜಯಜಯ ಕಾಮಜನಕ ಜಯ ।
ಜಯ ತರಣಿಕಿರಣನಿಭಚರಣನೀರೇಜ ಜಯ ।
ಜಯ ಕೀರ್ತನೋದ್ಧಾರ ಜಯಕುಮತಿಸಂಹಾರ ಜಯ ಜಯತು
[ಕೇಯೂರಹಾರ ॥

ಪಾ—1. ಶರದಮಿಂಚಿನವೊಲೆಸೆವುರಸ್ಥಳದಲಿಹಮೃಗಲಾಂಛನವನು.
2. ನೆಲಸಿದಂ ಅಲಸಿದಂ. 3. ಅಮರದಂತಿದೆ.

ಜಯ ಕೈಟಭಾರಿ ಜಯಜಯ ಕೋಮಲಾಂಗ ಜಯ ।
(ಜಯ ಭಕ್ತಜನಸಾಧ್ಯ) ಜಯ ಮುನಿಹೃದಯಮಧ್ಯ ।
ಜಯ ಶರಧಿಗಂಭೀರ ಜಯ ಕಾಲಕಾಲ ಜಯಜಯ ನಮೋ ನಮ
[ಎಂದನು ॥

13.

ನಿನ್ನ ನಂಬಿದ ಶರಣರಂ ಕಾವ ಬಿರುದುಳ್ಳ ।
ಚೆನ್ನಿಗನೆ ನೀನೆಂದು ಏಕೋದೃಢದಿ ನಂಬಿ ।
ನನ್ನಿಯಿಂ ಬಾಲನಾಂ ಭಜಿಸೆ ಮೆಯ್ದೋಱಿದೈ ನಿನ್ನನಿಂ ಪೋಲ್ವರುಂಟೆ ॥
ಎನ್ನುಭಯಕುಲದವರು ಸಂದರಕ್ಷಯಗತಿಗೆ ।
ಇನ್ನು ನಾಂ ಭವದ ಕಿಲ್ಬಿಷಕಂಜೆನೆನುತಾರ್ಕ್ಷ್ಯ ।
ಪಾರ್ಣವನ ಚರಣಸರಸಿಜದಮೇಲಡೆಗೆಡೆಯೆ ಕರುಣಾರ್ಣವಂ ನುಡಿದನು ॥

14.

ಮೆಚ್ಚಿದೆನು ಮಗನೆ ನೀ ಮಾಡಿದ ಸುಸಂಸ್ತುತಿಗೆ ।
ಸಚ್ಚರಿತ ನಿನಗೆಂತು ಪಸುಳ್ ನಿನಗೀಪರಿಯ ।
ನಿಚ್ಚಟದ ಭಕ್ತಿ ತೋಱಿತು ನಿನ್ನುವಂ ಪೋಲ್ವರೀಜಗದೊಳಾರಿರ್ಪರು ॥
ಮುಚ್ಚುಮಱೆಯೇಕಿನ್ನು ನಿನ್ನ ಚಿತ್ತದೊಳಗು ।
ಳ್ಳಿಚ್ಚೆಯಂ ಪಾಲಿಸುವೆ ಬೇಡು ವರವನೆನಲ್ಕೆ ।
ಯಚ್ಚುತನ ಪದಕೆಱಗಿ ತನ್ನ ಮನದಂದಮಂ ಪೊಡೆಮಟ್ಟು ಬಿನ್ನೈಸಿದಂ ॥

15.

ಆಸೆ ಬೇಱಿಲ್ಲೆನಗೆ ನಿನ್ನ ಪದಪಂಕಜದ ।
ದಾಸ ದಾಸಾನುದಾಸರ ಸಂಗವದಱಿಂದೆ ।
ಲೇಸೆನಿಪ ಭಕ್ತಿ ತವಸನ್ನಿಧಿಗೆ ಬರ್ಪವೋಲ್ ಕರುಣಿಸಿಂದೆನಗೆನಲ್ಕೆ ॥
ಬೇಸಱದೆ ಕೇಳ್ಮಗನೆ ಕೆಲವುದಿನ ರಾಜ್ಯಮಂ ।
ಲೇಸಾಗಿ ಪಾಲಿಸುವೆ ಮತ್ತೆ ತಾರಾಗ್ರಹ ।
ಕ್ಕಾಸೂರ್ಯಚಂದ್ರಮುಖ್ಯರ್ಗೆಲ್ಲ ನೀ ಮುಖ್ಯಪದವನೆಯ್ದುವೆ
[ಯೆಂದನು ॥

ಎಂದೊಡಂಬಡಿಸೆ ಕೇಳದೆಯು ಸೆಱಗಂ ಪಿಡಿದು ।
ಬಂದಪೆನು ತಾ ನಿನ್ನ ಸಂಗಡೆಂಬುದ ಕಂಡಃ ।
ನಿಂದು ಅಂತರ್ಧಾನಮಂ ನೆನೆಯಲಾಗ ಮನಗುಂದಿ ಕಡುಹಮ್ಮೈಸುತ ॥
ನೊಂದು ಮಾಡುವುದೇನು ಹರಿ ಬಿಟ್ಟು ಪೋದನವ ।
ನೆಂದ ಮಾತಿನವೊಲಾಂ ಪೋಪೆ ನಿಜಪುರಕೆನುತ ।
ಲಂದು ಮನದಲ್ಲಿ ಯೋಚನೆಗೆಯ್ದು ಮೆಲ್ಲನಲ್ಲಿಂದ ನಡೆತಂದನಾಗ ॥೧೬॥

17.

ಪುರಕೆ ನಡೆತರೆ ಕಂಡು ನಾರದಂ ಪಿತನೆಡೆಯೊ ।
ಳಱುಹಲ್ಕೆ ಬಂದು ಪಿತನತಿಜವದೆ ತಕ್ಕೈಸಿ ।
ಕರೆದುಯ್ದು ರಾಜ್ಯಾಭಿಷೇಕವಂ ವಿರಚಿಸಲ್ ಪ್ರೇಮದಿಂದಾಗ ಧ್ರುವನು ॥
ಧರೆಯನಿಪ್ಪತ್ತು (ಮೇಲಾ)ಱು ಸಾಸಿರ(ವೆನಿಪ) ।
ವರುಷ(ಪರಿಯಂತರಂ ಪೊರೆಯುತ್ತೆ) ಧರ್ಮದಿಂ ।
ವರಸುದತಿ ಪುತ್ರಪೌತ್ರಾದಿ ಸಂಪದ(ವೊಂದಿ) ಹರಿಧ್ಯಾನದೊಳಗಿರ್ದನು ॥

18.

ಸಿರಿಯರಸ ಧ್ರುವಗೊಲಿದ ಚಾರಿತ್ರಸುಧೆಯನಾಂ ।
ವಿರಚಿಸಿದೆನೊಲಿದು ಸಂಕ್ಷೇಪದಿಂದನುದಿನದೊ ।
ಳರುಣೋದಯದೊಳದಂ ಹೇಳಿ ಕೇಳದ ಜನರ ದುರಿತೌಘಸಂಕುಲವನು ॥
ಪರಿದಿಕ್ಕಿಯವರ ಮನದಿಷ್ಟಸಂಪದಗಳಂ ।
ವರದ ವೇಂಕಟರಾಯ ಕರುಣಿಸುವನೆಂಬುದಿದು ।
ನಿರುತ ನಿಶ್ಚಯವೆಂದು ನೆರೆ ನಂಬಿ ಸಜ್ಜನರು ಮುಱಿಯದಾಚರಿಪುದಿದನು ॥

ಶ್ರೀ ಹರಯೇ ವಾಸುದೇವಾಯ ನಮಃ.

K81.1
R89D
[illegible]
1916

کتب خانہ
جامعۂ عثمانیہ
۱۔ اراکین مجلس اعلیٰ، مجلس رفقا، مجلس انتظامی، مجالس شعبہ جات و نصاب پانچ کتابیں ایک ماہ تک اپنے پاس رکھ سکینگے۔
۲۔ اساتذہ جامعۂ عثمانیہ و کلیہ جات ملحقہ و گزیٹڈ عہدہ داران جامعہ اور اراکین دار الترجمہ دس کتابیں ایک ماہ تک اپنے پاس رکھ سکینگے۔
۳۔ طیلسانین رجسٹر شدہ دو کتابیں، بی۔ اے اور انٹرمیڈیٹ کے طلبہ تین کتابیں، ایم۔ اے، ال ال بی و تحقیقاتی جماعتوں کے طلبہ پانچ کتابیں دو ہفتہ تک اپنے پاس رکھ سکینگے۔
۴۔ مدت مقررہ پر کتابیں واپس نہ ہوں تو طلبہ سے بحساب ایک آنہ یومیہ فی کتاب دیرانہ لیا جائیگا۔
۵۔ بشرط موقع کتابیں مکرر جاری کی جاسکینگی مگر اس غرض کے لئے کتب خانہ میں کتاب کا لانا لازم ہے۔
۶۔ کتابیں گم یا خراب ہو جائیں تو مستعیر پر ذمہ داری عائد ہوگی۔
۷۔ کتابوں پر کسی قسم کا نشان سیاہی یا پنسل سے نہ لگایا جائے۔
۸۔ قلمی نسخے اور حوالے کی کتابیں جاری نہ کیجا سکینگی۔